# ಮೆಟ್ರೊ ಪ್ರಯಾಣಕ್ಕೆ ಕ್ಯೂ.ಆರ್. ಕೋಡ್ ಟಿಕೆಟ್

**ಮೆಟ್ರೊ ರೈಲು ನಿಲ್ದಾಣಗಳಲ್ಲಿ ಟಿಕೆಟ್(ಟೋಕನ್)ಗಾಗಿ ಅಥವಾ ಸ್ಮಾರ್ಟ್‌ಕಾರ್ಡ್ ರೀಚಾರ್ಜ್‌ಗಾಗಿ ಇನ್ನು ಸಾಲುಗಟ್ಟಿ ನಿಲ್ಲುವ ಅಗತ್ಯವಿಲ್ಲ. ಸ್ಮಾರ್ಟ್‌ಫೋನ್‌ನಲ್ಲೇ ಟಿಕೆಟ್‌ಗಳನ್ನು ಖರೀದಿಸಬಹುದು, ಸ್ಮಾರ್ಟ್‌ಕಾರ್ಡ್ ರೀಚಾರ್ಜ್ ಮಾಡಬಹುದು.**

■ **ಶಶಿಕುಮಾರ್ ಸಿ.**

‘ಬೆಂಗಳೂರು ಮೆಟ್ರೊ ರೈಲು ನಿಗಮ’ವು (ಬಿಎಂಆರ್‌ಸಿಎಲ್) ಪ್ರತ್ಯೇಕವಾಗಿ ‘ನಮ್ಮ ಮೆಟ್ರೊ’ ಆ್ಯಪ್ ಮೂಲಕ ಮತ್ತು ವಾಟ್ಸ್‌ಆ್ಯಪ್ ಸಹಭಾಗಿತ್ವದಲ್ಲಿ ಈಚೆಗೆ ಕ್ಯೂ.ಆರ್. (ಕ್ವಿಕ್ ರೆಸ್ಪಾನ್ಸ್) ಕೋಡ್ ಟಿಕೆಟ್ ಸೌಲಭ್ಯವನ್ನು ಪರಿಚಯಿಸಿದೆ. ಈ ಮೂಲಕ ಪ್ರಯಾಣಿಕರು ಟಿಕೆಟ್‌ಗಳನ್ನು ಸುಲಭವಾಗಿ ಪಡೆಯಬಹುದು.

ಮೆಟ್ರೊ ರೈಲಿನಲ್ಲಿ ಪ್ರಯಾಣಿಸಲು ಟಿಕೆಟ್‌ಗಾಗಿ ನಿಲ್ದಾಣಗಳಲ್ಲಿ ಸಾಲಿನಲ್ಲಿ ನಿಲ್ಲುವುದು ಅನಿವಾರ್ಯ. ಸ್ಮಾರ್ಟ್‌ಕಾರ್ಡ್ ರೀಚಾರ್ಜ್ ಮಾಡಿಸಲೂ ಸರದಿಯಲ್ಲಿ ನಿಲ್ಲಬೇಕು. ಪ್ರಯಾಣಿಕರಿಂದ ನಿಲ್ದಾಣಗಳು ಕಿಕ್ಕಿರಿದು ತುಂಬಿದ್ದಾಗಲಂತೂ ಟಿಕೆಟ್ ಪಡೆಯಲು ಹಾಗೂ ಸ್ಮಾರ್ಟ್‌ಕಾರ್ಡ್ ರೀಚಾರ್ಜ್ ಮಾಡಿಸಲು ಸಾಕಷ್ಟು ಸಮಯ ಬೇಕಾಗುತ್ತದೆ. ಈ ವಿಳಂಬವನ್ನು ತಪ್ಪಿಸುವ ಸಲುವಾಗಿ ‘ಬಿಎಂಆರ್‌ಸಿಎಲ್’ ಕ್ಯೂ.ಆರ್. ಕೋಡ್ ಟಿಕೆಟ್ ಸೌಲಭ್ಯವನ್ನು ನ. 1ರಿಂದ ಪರಿಚಯಿಸಿದೆ. ವಾಟ್ಸ್‌ಆ್ಯಪ್ ಸಹಭಾಗಿತ್ವದಲ್ಲಿ ‘ಎಂಡ್–ಟು–ಎಂಡ್ ಟಿಕೆಟಿಂಗ್’ ವ್ಯವಸ್ಥೆಯನ್ನು ಗ್ಲೋಬಲ್ ಟ್ರಾನ್ಸಿಟ್ ಸ್ಪೇಸ್‌ನಲ್ಲಿ ಮೊದಲ ಬಾರಿಗೆ ಪರಿಚಯಿಸಿದ ಖ್ಯಾತಿ ‘ಬಿಎಂಆರ್‌ಸಿಎಲ್’ನದ್ದಾಗಿದೆ.




ಬಳಕೆದಾರರು ವಾಟ್ಸ್‌ಆ್ಯಪ್ ಅಥವಾ ‘ನಮ್ಮ ಮೆಟ್ರೊ’ ಆ್ಯಪ್ ಮೂಲಕ ಕ್ಯೂ.ಆರ್. ಕೋಡ್ ಟಿಕೆಟ್ ಪಡೆಯಬಹುದಾಗಿದೆ. ಪ್ರಯಾಣ ಆರಂಭಿಸಬೇಕಾದ ನಿಲ್ದಾಣ ಮತ್ತು ತಲುಪಬೇಕಾದ ನಿಲ್ದಾಣದ ಹೆಸರನ್ನು ಆ್ಯಪ್‌ನಲ್ಲಿ ನಮೂದಿಸಿ, ಆನ್‌ಲೈನ್‌ನಲ್ಲೇ ದರ ಪಾವತಿಸಿದರೆ, ಮೊಬೈಲ್‌ನಲ್ಲಿ ಕ್ಯೂ.ಆರ್. ಕೋಡ್ ಟಿಕೆಟ್ ರೂಪುಗೊಳ್ಳುತ್ತದೆ. ಆ ಟಿಕೆಟ್ ಅನ್ನು ಮೆಟ್ರೊ ನಿಲ್ದಾಣಗಳ ಪ್ರವೇಶ ಮತ್ತು ನಿರ್ಗಮನ ಗೇಟ್‌ಗಳಲ್ಲಿ ಅಳವಡಿಸಿರುವ ಸ್ಕ್ಯಾನಿಂಗ್ ಉಪಕರಣಗಳಲ್ಲಿ ಸ್ಕ್ಯಾನ್ ಮಾಡಬೇಕು.

“ಆ್ಯಂಡ್ರಾಯ್ಡ್ ಫೋನ್ ಬಳಕೆದಾರರು ಗೂಗಲ್ ಪ್ಲೇಸ್ಟೋರ್‌ನಿಂದ ‘ನಮ್ಮ ಮೆಟ್ರೊ ಆ್ಯಪ್’ ಅನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು. ಇಲ್ಲವಾದರೆ, ವಾಟ್ಸ್‌ಆ್ಯಪ್‌ನಲ್ಲಿ ‘ಬಿಎಂಆರ್‌ಸಿಎಲ್’ನ ವ್ಯಾಟ್ಸ್‌ಆ್ಯಪ್ ಸಂಖ್ಯೆಯನ್ನು (8105556677) ಸೇವ್ ಮಾಡಿಕೊಂಡು, ಅದಕ್ಕೆ ‘ಹಾಯ್’ ಎಂಬ ಸಂದೇಶ ಕಳುಹಿಸುವ ಮೂಲಕ ಕ್ಯೂ.ಆರ್. ಕೋಡ್ ಟಿಕೆಟ್ ಖರೀದಿಸಲು ಚಾಟ್‌ಬಾಟ್‌ನೊಂದಿಗೆ ಸಂವಹನ ಮಾಡಬಹುದು. ಈ ಸಂವಹನವನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಮಾಡಬಹುದು” ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

ಮನೆಯಲ್ಲಿ ಕುಳಿತು ಚಿತ್ರಮಂದಿರಗಳ ಟಿಕೆಟ್ ಖರೀದಿಸಿ, ಚಿತ್ರಮಂದಿರಗಳ ಬಳಿ ಅವುಗಳನ್ನು ತೋರಿಸಿ ಅಥವಾ ಸ್ಕ್ಯಾನ್ ಮಾಡಿ ಒಳಹೋಗುವ ಮಾದರಿಯಲ್ಲೇ ಮೆಟ್ರೊ ರೈಲು ಪ್ರಯಾಣಿಕರು ಈ ಸೇವೆಯನ್ನು ಪಡೆಯಬಹುದು. ಒಮ್ಮೆ ಖರೀದಿಸಿದ ಕ್ಯೂ.ಆರ್. ಕೋಡ್ ಟಿಕೆಟ್ ಆ ದಿನದ ಅಂತ್ಯದವರೆಗೆ ಚಾಲ್ತಿಯಲ್ಲಿರಲಿದೆ. ಪ್ರಯಾಣ ಮಾಡದಿರಲು ನಿರ್ಧರಿಸಿದರೆ, ದಿನ ಮುಕ್ತಾಯ ಆಗುವಷ್ಟರಲ್ಲಿ ಟಿಕೆಟ್ ರದ್ದತಿ ವಿಧಾನ ಬಳಸಿ, ಹಣವನ್ನು ವಾಪಸ್ ಪಡೆಯಬಹುದಾಗಿದೆ. ಒಂದು ವೇಳೆ ಟಿಕೆಟ್ ರದ್ದತಿಗೆ ಕೋರದಿದ್ದರೆ ದಿನದ ಅಂತ್ಯಕ್ಕೆ ಟಿಕೆಟ್ ತಾನಾಗಿಯೇ ರದ್ದಾಗಲಿದೆ ಹಾಗೂ ಪಾವತಿಸಿದ ಹಣ ಮರಳುವುದಿಲ್ಲ.

ಪ್ರಯಾಣಿಕರಿಗೆ ಅನುಕೂಲವಾಗಲೆಂದು ಕ್ಯೂ.ಆರ್. ಕೋಡ್ ಟಿಕೆಟ್ ಖರೀದಿಸಿದರೆ ಶೇ. 5ರಷ್ಟು ರಿಯಾಯಿತಿಯನ್ನು ‘ಬಿಎಂಆರ್‌ಸಿಎಲ್’ ನೀಡಲಿದೆ.




ವಾಟ್ಸ್‌ಆ್ಯಪ್ ಚಾಟ್‌ಬಾಟ್‌ನ ಚಿತ್ರ

ಕ್ಯೂ.ಆರ್. ಕೋಡ್ ಟಿಕೆಟ್ ಅನ್ನು ಮತ್ತೊಬ್ಬರಿಗೆ ಶೇರ್ ಮಾಡಲು ಇಲ್ಲಿ ಅವಕಾಶವಿಲ್ಲ. ಟಿಕೆಟ್ ಅನ್ನು ಸ್ಕ್ರೀನ್‌ಶಾಟ್ ತೆಗೆಯುವ ಆಯ್ಕೆಯನ್ನೂ ಆ್ಯಪ್‌ನಲ್ಲಿ ನಿರ್ಬಂಧಿಸಲಾಗಿದೆ. ಒಂದೇ ಬಾರಿ ಒಬ್ಬರಿಗೆ ಮಾತ್ರ ಟಿಕೆಟ್ ಪಡೆಯಲು ಅವಕಾಶವಿದ್ದು, ಒಂದಕ್ಕಿಂತ ಹೆಚ್ಚು ಟಿಕೆಟ್ ಅಗತ್ಯವಿದ್ದರೆ ಮತ್ತೆ ಹೊಸದಾಗಿ ಖರೀದಿಸಬೇಕು.

## ವಾಟ್ಸ್‌ಆ್ಯಪ್ ಚಾಟ್‌ಬಾಟ್ ವಿಶೇಷ

- ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಂವಾದ ಮಾಡುವ ಆಯ್ಕೆ.
- ಸುಲಭವಾಗಿ ಕ್ಯೂ.ಆರ್. ಕೋಡ್ ಟಿಕೆಟ್ ಖರೀದಿಯಿಂದ ಸಮಯದ ಉಳಿತಾಯ.
- ಮೆಟ್ರೊ ಸ್ಮಾರ್ಟ್‌ಕಾರ್ಡ್‌ಗಳ ರೀಚಾರ್ಜ್ ಮಾಡಬಹುದು.
- ಪ್ರಯಾಣಿಕರ ಸ್ಥಳದ ಹತ್ತಿರವಿರುವ ಮೆಟ್ರೊ ನಿಲ್ದಾಣದ ಮಾಹಿತಿ ಲಭ್ಯ.
- ವಿವಿಧ ನಿಲ್ದಾಣಗಳಲ್ಲಿ ರೈಲು ಹೊರಡುವ ಸಮಯದ ಮಾಹಿತಿಯೂ ಲಭ್ಯ.
- ಯಾವುದೇ ಎರಡು ನಿಲ್ದಾಣಗಳ ನಡುವಿನ ದರದ ಮಾಹಿತಿ.
- ಗ್ರಾಹಕರಿಗೆ ತ್ವರಿತ ಪ್ರತಿಕ್ರಿಯೆ.
- ತ್ವರಿತ ಮತ್ತು ತಡೆರಹಿತ ಪಾವತಿಗೆ ಅವಕಾಶ. ■